ತುರುವೇಕೆರೆ ನಗರದ ಮುಸ್ಲಿಂ ಬಂಧುಗಳಿಗೆ ಶಾದಿಮಹಲ್ ಕಟ್ಟುವುದು

247 (243): ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) ಮಾನ್ಯ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ನಗರದ ಅಪಾರ ಸಂಖ್ಯೆಯಲ್ಲಿ ಅಲ್ಪ ಸಂಖ್ಯಾತರ ಬಂಧುಗಳು ಇರುವುದು ನಿಜವೇ;

ಆ) ಹಾಗಿದ್ದಲ್ಲಿ ಅನೇಕ ಕಾರ್ಯಗಳನ್ನು ಮಾಡಲು ಇಲ್ಲಿ ಶಾದಿಮಹಲ್ ಇಲ್ಲದೆ ಮುಸ್ಲಿಂ ಜನಾಂಗದವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ವರ್ಷ ತಕ್ಷಣ ಅನುದಾನ ಮಂಜೂರು ಮಾಡಲಾಗುವುದೆ;

ಈ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು;

ಶ್ರೀ ಎಂ. ಎಲ್. ಉಸ್ತಾದ್ (ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಮತ್ತು ಈ) ಈ ಸಮಾಜದವರಿಂದ ನಿಯಮಾನುಸಾರ ಪ್ರಸ್ತಾವನೆ ಬಂದಲ್ಲಿ, ಪರಿಶೀಲಿಸಿ ಮಂಜೂರು ಮಾಡಲಾಗುವುದು.

ರಾಜ್ಯದಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಬ್ಸಿಡಿ ಬಿಡುಗಡೆ

248 (244): ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) ಮಾನ್ಯ ಕಾರ್ಮಿಕ ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಎಷ್ಟು ವರ್ಷದಿಂದ ಎಷ್ಟು ಸಬ್ಸಿಡಿ ಹಣ ನೀಡಲಾಗಿಲ್ಲ; ಕಾರಣವೇನು;

ಆ) ತುಮಕೂರು ಜಿಲ್ಲೆಯಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳೆಷ್ಟು;

ಇ) ಈ ಕೈಗಾರಿಕೆಗಳಿಗೆ ಇದುವರೆಗೂ ನೀಡಬೇಕಾದ ಸಬ್ಸಿಡಿ ಹಣವೆಷ್ಟು;

ಈ) ಸದರಿ ಹಣವನ್ನು ನೀಡದಿರಲು ಕಾರಣವೇನು; ಯಾವಾಗ ನೀಡಲಾಗುವುದು;

ಉ) ನಿಖರವಾದ ಮಾಹಿತಿಯನ್ನು ಪ್ರತಿಯೊಂದು ತಾಲ್ಲೂಕುವಾರು ವಿವರ ಕೊಡುವುದು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು):

ಅ) ದಿನಾಂಕ: 1.1.1999 ರಿಂದ 31.3.2003 ರ ವರೆಗೆ ರೂ. 40 567.36 ಲಕ್ಷಗಳ ಸಬ್ಸಿಡಿ ಹಣವನ್ನು ರಾಜ್ಯದಲ್ಲಿರುವ 18,279 ಕೈಗಾರಿಕಾ ಘಟಕಗಳಿಗೆ ಸಹಾಯಧನ ಮಂಜೂರು ಮಾಡಲಾಗಿದ್ದು, 4,05,67 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆಯವ್ಯಯದ ಕೊರತೆಯಿಂದಾಗಿ ಪ್ರತಿ ವರ್ಷವೂ ಮಂಜೂರು ಮಡಲಾಗುತ್ತಿದ್ದ ಸಹಾಯಧನವನ್ನು ಸಕಾಲದಲ್ಲಿ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ.

ಆ) ತುಮಕೂರು ಜಿಲ್ಲೆಯಲ್ಲಿ ನವೆಂಬರ್ 2003ರ ಅಂತ್ಯಕ್ಕೆ 18176 ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಯಾಗಿರುತ್ತವೆ.